ಫೇಮಸ್ ಫೋಟೊಗ್ರಾಫರ್ಸ್ ಅಂತೇಳಿ ಪೋಸು ಕೊಡ್ತಾರೆ ಥೂ...' ಎಂದು ಖಡಕ್ಕಾಗಿ ನುಡಿದು ತುಪ್ಪಿದ. ಪ್ರವೀಣನ ಮಾತುಗಳು ನಮಗೂ ಅನ್ವಯಿಸಿ ಹೇಳಿದಂತೆ ಇತ್ತು. ನಮ್ಮ ಮುಖ ಒಮ್ಮೆ ನೋಡಿ, 'ನೀವು ಬಿಡಿ ಅಂತವರಲ್ಲ. ಜಂಟಲ್ ಮೆನ್ಗಳು' ಎಂದು ಸಮಾಧಾನದ ಸುಳ್ಳು ಹೇಳಿದ.

ನಮಗೂ ಪಕ್ಷಿ ಕೂರುವ ಜಾಗಕ್ಕೂ ಸಾಕಷ್ಟು ಅಂತರವಿತ್ತು. ಅಲ್ಲೀ ತನಕ ಹೋಗಬಲ್ಲ ಜಾಸ್ತಿ ಎಂ.ಎಂ.ನ ಟೆಲಿಲೆನ್ಸ್ ಇದ್ದರಷ್ಟೇ ಚಿತ್ರ ತೆಗೆಯಬಹುದಿತ್ತು. ನನ್ನ ಜೊತೆ ಬಂದಿದ್ದ ದೀಪಕ್ ಮತ್ತು ಡಾ.ರಾಘವೇಂದ್ರ ಆರುನೂರು ಎಂ.ಎಂ.ನ ಪ್ರೈಮ್ ಲೆನ್ಸ್ ಹಾಕಿಕೊಂಡು ಅದಕ್ಕೆ ಹೆಚ್ಚುವರಿಯಾಗಿ ದೂರವನ್ನು ಹಿಗ್ಗಿಸಬಲ್ಲ ಎಕ್ಸ್ ಕನ್ವರ್ಟ್ ಏರಿಸಿಕೊಂಡಿದ್ದರು. ಅವರೆದುರು ನನ್ನಂತಹ ಸಣ್ಣಪುಟ್ಟ ಲೆನ್ಸ್‌ನವರು ಸ್ಪರ್ಧೆ ಮಾಡುವಂತೆಯೇ ಇರಲಿಲ್ಲ. 'ಅಗೋ ಆ ಹಸಿರು ಪಾಚಿಯ ಕೆಳಗೆ ಮರದ ಬಿಳಿ ತೊಗಟೆ ಕಾಣುತ್ತದಲ್ಲ ಅಲ್ಲಿಗೆ ಬರುತ್ತದೆ. ಅಗೋ ಆ ಕಡೆಯಿಂದ ಕೂಗುತ್ತಿದೆ. ಈಗ ಬರುತ್ತದೆ ನಿಶಾನೆ ಇಟ್ಟು ರೆಡಿಯಿರಿ.' ಎಂದು ರಂಟೂ ಪಿಸುಗುಟ್ಟಿದ.

ನಾವು ಮೂವರು ಕ್ಯಾಮೆರಾ ಸೆಟ್ ಮಾಡಿಕೊಳ್ಳುವ ಅಡಾವುಡಿಯಲ್ಲಿ ಇದ್ದಾಗ ವುಡ್ ಪೆಕರ್ ಓಡಿ ಬಂದು ಮರಿಗಳಿಗೆ ಊಟ ಉಣಿಸಿ ಓಡಿ ಹೋಯಿತು. ಮಿಂಚುಳ್ಳಿ ಪಕ್ಷಿಗಳ ಥರವೇ ಬುಲೆಟ್ ವೇಗದಲ್ಲಿ ಬರುವ ಇವನ್ನು ಸೆರೆ ಹಿಡಿಯುವುದು ಒಂದು ಸವಾಲೇ ಸರಿ. ಅಲ್ಲಾಡದೆ, ಮೌನ ವಹಿಸಿ ಕಣ್ಣು ತೆರೆದಿಟ್ಟುಕೊಂಡು ಆ ಮರವನ್ನೇ ದಿಟ್ಟಿಸುತ್ತಾ ನಿಂತೆವು. ಮರಿಗಳ ಸಲಹುವ ಪಕ್ಷಿಗಳು ತಮ್ಮ ಗೂಡಿಗೆ ಬರುವ ಮೊದಲು ತುಸು ಸನಿಹದ ಮರದ ಕೊಂಬೆಗಳ ಮೇಲೆ ಮೊದಲು ಕೂರುತ್ತವೆ. ಆ ಸ್ಥಳ ಹೆಚ್ಚು ಕಡಿಮೆ ಅದರ ಗೂಡಿಗೆ ಸರಳರೇಖೆಯಲ್ಲಿ ಹಾರಿ ಹೋಗಬಲ್ಲ ನೇರ ಮಾರ್ಗವಾಗಿರುತ್ತದೆ. ಅಲ್ಲಿಂದ ಒಮ್ಮೆ ಹಾರಿದರೆ ನೇರ ಅದು ತಲುಪುವುದು ಗೂಡಿನ ಬಾಗಿಲಿಗೆ. ಪ್ರತಿ ಸಲವೂ ತಿನಿಸು ಹಿಡಿದು ಬರುವ ಹಕ್ಕಿ ವಿಶಿಷ್ಟ ದನಿಯಲ್ಲಿ ಕೂಗು ಹಾಕುತ್ತವೆ.

ನಾನು ನಿಂತಿದ್ದ ಸ್ಥಳಕ್ಕೆ ಹಕ್ಕಿ ಮೊದಲು ಬಂದು ಕೂರುವ ಸ್ಥಳ ಕಾಣುತ್ತಿತ್ತು. ಹಕ್ಕಿಯ ಆಗಮನ ಮತ್ತು ನಿರ್ಗಮನದ ದಿಕ್ಕುಗಳು, ಅದರ ಕೂಗು, ವೇಗ, ರೆಕ್ಕೆ ಬಿಚ್ಚಿ ಬಡಿಯುವ ಅಂತರ ಎಲ್ಲವನ್ನೂ ಸೂಕ್ಷ್ಮವಾಗಿ ಗಮನಿಸಬೇಕು. ಯಾವ ಜಾಗಕ್ಕೆ ಹಕ್ಕಿ ಬಂದು ಲ್ಯಾಂಡ್ ಆಗುವುದೋ ಅಲ್ಲಿಗೆ ಕ್ಯಾಮೆರಾ ಗುರಿಯನ್ನು ಫಿಕ್ಸ್ ಮಾಡಿಕೊಂಡೆ. ಹಕ್ಕಿ ಮರ ಬಿಟ್ಟು ಹಾರಿ ಗೂಡಿನ ಸಮೀಪ ಬರಲು ಸುಮಾರು ಐದಾರು ಸೆಕೆಂಡ್ ಸಮಯ ಸಾಕಿತ್ತು. ಅದು ಕೂತಲ್ಲಿಂದ ನೆಗೆದ ತಕ್ಷಣವೇ ನಾನು ಚಕಚಕ ಕ್ಲಿಕ್ಕಿಸಿದೆ. ಅದು ಹಾರಿ ಬರುವ ಚಿತ್ರ ನನ್ನ ಫ್ರೇಮಿನಲ್ಲಿ ಬಂದೇ ಬರುತ್ತದೆ ಎಂಬ ನಂಬಿಕೆ ಇತ್ತು. ಆದರೆ ಹಕ್ಕಿ ಫೋಕಸ್ ಚೌಕಟ್ಟಿನಿಂದ ಆಚೆ ಈಚೆ ಹಾರಿ ಚಿತ್ರ ನಿಖರವಾಗಿ ಬರಲಿಲ್ಲ. ಮುಸುಕಾಗಿತ್ತು. ಬೆಳಕು ಕಡಿಮೆಯಿದ್ದ ಕಾರಣ ಹಾರುವ ಚಿತ್ರದ ದುಸ್ಸಾಹಸ ಮಾಡುವುದು ಸಾಧ್ಯವಿರಲಿಲ್ಲ. ಫೋಟೊಗ್ರಫಿಯಲ್ಲಿ ಬೆಳಕಿನ ಲಭ್ಯತೆ ಇಲ್ಲದಿದ್ದರೆ ನೀವೆಷ್ಟೇ ಮೈ ಪರಚಿಕೊಂಡರೂ, ನಿಮ್ಮ ಬಳಿ ಎಷ್ಟೇ ಅತ್ಯಾಧುನಿಕ ಕ್ಯಾಮೆರಾ ಇದ್ದರೂ ಏನೂ ಮಾಡಲಾವುದಿಲ್ಲ. ಎಲ್ಲದಕ್ಕೂ ಸೂರ್ಯನ ಕೃಪೆ ಇರಲೇಬೇಕು.

ಸೂರ್ಯನ ದಟ್ಟಬೆಳಕು ಬರುವ ತನಕ ಹಕ್ಕಿ ರೆಕ್ಕೆ ಬಿಚ್ಚಿ ಹಾರುತ್ತಾ ಬಂದು ಹೋಗುವ ವಿಡಿಯೊ ಮಾಡಿಕೊಳ್ಳುವ ಆಲೋಚನೆ ಬಂತು. ಹೇಗೂ ವಿಡಿಯೊ ಚಿತ್ರೀಕರಣಕ್ಕೆ ಕಡಿಮೆ ಬೆಳಕಿದ್ದರೂ ನಡೆಯುತ್ತೆ. ಈ ಪ್ರಯೋಗದಲ್ಲಿ ಒಂದಷ್ಟು ಲಾಭವಾಯಿತು. ಹಕ್ಕಿಯ ಓಡಾಟದ ಚಲನೆಯ ಸೂಕ್ಷ್ಮಗಳನ್ನು ಗುರುತಿಸಿಕೊಳ್ಳಲು ಅನುಕೂಲವೂ ಆಯಿತು. ಕೊಂಚ ಬೆಳಕು ಸಿಕ್ಕಮೇಲೆ ಹಕ್ಕಿ ಗೂಡಿನಿಂದ ಹಿಂತಿರುಗುವ ಚಿತ್ರ ತೆಗೆಯುವುದು ಸರಿ ಎನಿಸಿತು. ಆದರೆ ಸಮಸ್ಯೆ ಇದ್ದದ್ದು ಹಕ್ಕಿ ಗೂಡಿನೊಳಗೆ ಹೋಗಿದ್ದು ಯಾವಾಗ ಹೊರಬರುತ್ತದೆ ಎಂದು ಗೊತ್ತು ಮಾಡಿಕೊಳ್ಳುವ ತಂತ್ರದಲ್ಲಿತ್ತು. ಕೆಲವೊಮ್ಮೆ ಬೇಗ ಬಂದರೆ, ಅನೇಕ ಸಲ ತಡಮಾಡುತ್ತಿತ್ತು. ಆಮೇಲೆ ಮಿಂಚಿನಂತೆ ಗೂಡಿನಿಂದ ಹಾರಿ ಹೋಗುತ್ತಿತ್ತು. ನಮ್ಮ ನಿರೀಕ್ಷೆ ಇದ್ದದ್ದು ನಾವು ಫೋಕಸ್ ಮಾಡಿಕೊಂಡ ಏರಿಯಾದ ವ್ಯಾಪ್ತಿಯೊಳಗೆ ಅದು ನೇರವಾಗಿ ಹಾರಿ ಬರಲಿ ಎಂಬುದು. ಈ ಕನಸಿಗೆ ಅದೃಷ್ಟದ ಬೆಂಬಲವೂ ಬೇಕು. ಎಷ್ಟೋ ಸಲ ಅನ್ನಿಸುತ್ತದೆ. ಈ ಪಕ್ಷಿಗಳಿಗೆ ಫೋಟೊಗ್ರಾಫರ್‌ಗಳ ಕಷ್ಟ ಕೊಂಚ ಗೊತ್ತಾದರೆ ಒಳ್ಳೆಯದು ಎಂದು. ಅವುಗಳಿಗೂ ತಿಳಿ ಹೇಳುವ ತಂತ್ರಜ್ಞಾನ ಮುಂದೆ ಬಂದರೂ ಬಂದೀತು. ಮನುಷ್ಯನ ಸ್ವಾರ್ಥ, ದುರಾಸೆ ಹೆಚ್ಚಿದಷ್ಟೂ